ಸಾಕ್ಷಿಯನ್ನು ದಿಃ**28.04.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಅರ್ಜಿಗಳ ಮೇಲಿನ ಆದೇಶದಂತೆ ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಆರ್ ಕೆ ಆರ್ ಪರ ಶ್ರೀ ಎ ಹೆಚ್ ಕೆ ವಕೀಲರಿಂದಃ-**

ನನ್ನ ತಂದೆಗೆ ನನ್ನನ್ನು ಸೇರಿಸಿ ಇಬ್ಬರು ಮಕ್ಕಳು. ನಾನು ಎರಡನೇಯವಳು. ನನಗೆ ಒಬ್ಬ ಅಣ್ಣ ಇದ್ದಾರೆ. ನನ್ನ ಅಣ್ಣನಿಗೂ ಕೂಡ ಮದುವೆಯಾಗಿದೆ. ನನ್ನ ತಂದೆಗೆ ದೊಡ್ಡೇಗೌಡನ ಕೊಪ್ಪಲಿನಲ್ಲಿ 1 ಎಕರೆ ಜಮೀನು ಇದೆ. ನನ್ನ ತಂದೆ ತೋಟಗಾರಿಕೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿ ಈಗ ನಿವೃತ್ತಿಯಾಗಿ 4 ವರ್ಷಗಳಾಗಿವೆ. ನನ್ನ ತಾಯಿ ಗೃಹಿಣಿ. ನನ್ನ ತಾಯಿ 6 ನೇ ತರಗತಿ ಓದಿದ್ದಾರೆ. ನನ್ನ ಮತ್ತು ಎದುರುದಾರರ ಮದುವೆ ಮನೆಯಲ್ಲಿ ನೋಡಿ ಮಾಡಿದ ಮದುವೆ. ಎದುರುದಾರರು ತಮ್ಮ ಸ್ನೇಹಿತರ ಮೂಲಕ ನಮ್ಮ ಮನೆಗೆ ಹುಡುಗಿ ನೋಡಲು ಬಂದಿದ್ದರು. ನನ್ನ ಮತ್ತು ಎದುರುದಾರರ ಮದುವೆಗೆ ನಮ್ಮಿಬ್ಬರ ಕುಟುಂಬಗಳ ಪರಸ್ಪರ ಒಪ್ಪಿಗೆ ಇತ್ತು. ನನ್ನ ಮತ್ತು ಎದುರುದಾರರ ಮದುವೆ ಹಿಂದೂ ಸಂಪ್ರದಾಯದಂತೆ ಆಗಿದೆ. ಮದುವೆಯಾದ ದಿನವೆ ಎದುರುದಾರರ ಮನೆಗೆ ಹೋದೆ. ನಂತರ ನನ್ನನ್ನು ತವರು ಮನೆಗೆ ಕರೆದುಕೊಂಡು ಹೋಗಲು ಕುಟುಂಬಸ್ಥರು, ಬಂಧು ಬಾಂಧವರು ಬಂದರು ಎಂದರೆ ಸಂಪ್ರದಾಯ ಪ್ರಕಾರ ಕರೆದುಕೊಂಡು ಹೋಗಿದ್ದಾರೆ.ಮದುವೆಯಾದ ಒಂದು ವಾರದಲ್ಲಿ ಸಂಪ್ರದಾಯಗಳೆಲ್ಲ ಮುಗಿದು ನಾನು ಎದುರುದಾರರ ಮನೆಗೆ ಹೋದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಹಾಗೂ ಈಗಾಗಲೇ ಸಾಕಷ್ಟು ಕಾಲಾವಕಾಶವನ್ನು ನೀಡಿರುವ ಕಾರಣ ಶ್ರೀ ಎ ಹೆಚ್ ಕೆ ವಕೀಲರು ಮಾಡಿದ ಕೋರಿಕೆಯನ್ನು ತಳ್ಳಿ ಹಾಕಿ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.